


## ‘ಬಿಎಸ್‌ಎ’ ಬೈಕ್‌ಗಳೂ ಬರಲಿವೆ

ಇಂಗ್ಲೆಂಡಿನ ಬರ್ಮಿಂಗ್‌ಹ್ಯಾಮ್ ಮೂಲದ ‘ಬಿಎಸ್‌ಎ’ ಬೈಕ್‌ಗಳನ್ನೂ ಮಹಿಂದ್ರಾ ಉತ್ಪಾದಿಸಲಿದೆ. ಪ್ರಸಿದ್ಧ ಮಾದರಿಗಳಾದ ಗೋಲ್ಡ್ ಸ್ಟಾರ್, ಎ7, ಎ10, 441, ರಾಕೆಟ್ 3, ಬ್ಯಾಂಟಮ್, ಲೈಟನಿಂಗ್ ಮಾದರಿಯ ಬೈಕ್‌ಗಳನ್ನು ಉತ್ಪಾದಿಸುವುದಾಗಿ ಪ್ರಕಟಿಸಿದೆ. ಪ್ಯೂಗಾಟ್ ಸ್ಕೂಟರ್‌ಗಳನ್ನೂ ತಯಾರಿಸುವ ಉದ್ದೇಶವಿದೆ ಎಂದು ಕಂಪೆನಿ ಹೇಳಿಕೊಂಡಿದೆ. ಆದರೆ, ಇದುವರೆಗೂ ಮಾದರಿಗಳ ಬಗ್ಗೆ ಯಾವ ಮಾಹಿತಿಯನ್ನೂ ಕಂಪೆನಿ ನೀಡಿಲ್ಲ.



ಕಾಲದಲ್ಲಿ ಡಾಲರ್ ಲೆಕ್ಕದಲ್ಲಿ ಕೊಳ್ಳಬೇಕಿತ್ತು. ಬೈಕ್ ಸಿಗಲು ಕನಿಷ್ಠವೆಂದರೂ ಒಂದು ವರ್ಷ ಕಾಯಬೇಕಿತ್ತು. ಒಂದೆರಡು ದಶಕ ‘ಜಾವಾ 250’ ಬೈಕ್ ರಸ್ತೆ ರಾಜನಂತೆ ಮೆರೆಯಿತು. ಆಗ ಪ್ರಸಿದ್ಧಿಯ ಉತ್ತುಂಗದಲ್ಲಿದ್ದ ರಾಯಲ್ ಎನ್‌ಫೀಲ್ಡ್ ಬುಲೆಟ್ ಬೈಕ್‌ಗಳಿಗೂ ಭಾರಿ ಪೈಪೋಟಿ ನೀಡಿತ್ತು. ಇದರ ಬೆಲೆ ರಾಯಲ್ ಎನ್‌ಫೀಲ್ಡ್ ಬೈಕ್‌ಗಳಿಗಿಂತಲೂ ಕಡಿಮೆ. ಆದರೆ, ನೋಟ– ಶಕ್ತಿಯಲ್ಲಿ ಸರಿಸಮ. ‘ಜಾವಾ 250’ ನಂತರ ಜಾವಾ ಕ್ಲಾಸಿಕ್, ಅದರ ನಂತರ ಯೆಜ್ಡಿ ರೋಡ್‌ಕಿಂಗ್, ಯಜ್ಡಿ ಕ್ಲಾಸಿಕ್, ಯಜ್ಡಿ ಮೋನಾರ್ಕ್, ಯೆಜ್ಡಿ 175, ಯೆಜ್ಡಿ ಕೋಲ್ಟ್ ಬೈಕ್‌ಗಳು ಪ್ರಸಿದ್ಧಿ ಪಡೆದವು. ಈ ಎಲ್ಲ ಬೈಕ್‌ಗಳ ಪೈಕಿ, ‘ಜಾವಾ 250’ ಬೈಕ್ ಬಿಟ್ಟರೆ ‘ಯಜ್ಡಿ ರೋಡ್‌ಕಿಂಗ್’ ಜನಪ್ರಿಯವಾಗಿತ್ತು.

ಯಜ್ಡಿ ರೋಡ್‌ಕಿಂಗ್ ತನ್ನ ವಿಶೇಷ ನೋಟದಿಂದಲೇ ಪ್ರಸಿದ್ಧಿ ಪಡೆಯಿತು. ಗಡುಸಾದ, ಬರೋಬ್ಬರಿ ತೂಕದ, ದಪ್ಪನೆಯ ಟೈರ್‌ಗಳನ್ನು ಹೊಂದಿದ್ದ ಈ ಬೈಕ್‌ನ ಕಿವಿಗಡಚಿಕ್ಕುವ ಶಬ್ದಕ್ಕೆ ಅಂದಿನ ಯುವ ಪೀಳಿಗೆ ಮಾರುಹೋಗಿತ್ತು. ಮಹಿಂದ್ರಾ ಕಂಪೆನಿಯ ಮೂಲಗಳ ಪ್ರಕಾರ ‘ಜಾವಾ 250’ ಹಾಗೂ ‘ಯಜ್ಡಿ ರೋಡ್‌ಕಿಂಗ್’ ಬೈಕ್‌ಗಳೆರಡನ್ನೂ ಬಿಡುಗಡೆ ಮಾಡಲಾಗುತ್ತಿದೆ. ಆದರೆ, 4 ಸ್ಟ್ರೋಕ್ ಎಂಜಿನ್ ಇರುವ ಕಾರಣ, ತನ್ನ ಮೂಲ ಗುಣದ ಸದ್ದನ್ನು ಈ ಹೊಸ ಬೈಕ್‌ಗಳು ಹೊಂದಿರುವುದಿಲ್ಲ ಎನ್ನುವುದು ಬಹುತೇಕ ಖಚಿತವಾಗಿದೆ.

1996ರಲ್ಲಿ ಕಂಪೆನಿಯು ಮುಚ್ಚಿಹೋದಾಗ, ‘ಯೆಜ್ಡಿ ರೋಡ್‌ಕಿಂಗ್’ನ ಆನ್ ರೋಡ್ 41 ಸಾವಿರ ರೂಪಾಯಿ ಇತ್ತು. ಆದರೆ, ಈಗ ಈ ಬೆಲೆಗೆ ಈ ಬೈಕ್ ಅನ್ನು ಕೊಡುವುದು ಸಾಧ್ಯವಿಲ್ಲ. ಈಗ ಸರಿಸುಮಾರು 1.5 ಲಕ್ಷ ರೂಪಾಯಿಗೆ ಮಾರುವ ಅಂದಾಜು ಕಂಪೆನಿಯದು.

ಈಗಾಗಲೇ ಜೆಕ್ ರಿಪಬ್ಲಿಕ್‌ನ ಟೈನೆಕ್ ನಾಡ್ ಸಜಾವೂ ಪಟ್ಟಣದಲ್ಲಿ ಉತ್ಪಾದನೆಯಾಗುತ್ತಿರುವ, ಜಾ 50, ಜಾವಾ 125, ಜಾವಾ 250, ಜಾವಾ 350 ಹಾಗೂ ಜಾವಾ 650 ಬೈಕ್ ಮಾದರಿಗಳನ್ನು ತಯಾರಿಸುವ ಉದ್ದೇಶವಿದೆ ಎಂದು ಮಹಿಂದ್ರಾ ಹೇಳಿಕೊಂಡಿದೆ. ಇಷ್ಟೆಲ್ಲಾ ಮಾದರಿಗಳನ್ನು ತಯಾರಿಸುವುದು ಕಷ್ಟಸಾಧ್ಯವೇ ಆದರೂ, ಕೆಲವನ್ನಾದರೂ ಮಹಿಂದ್ರಾ ತಯಾರಿಸಲಿದೆ. ಹೊಸ ಮಾದರಿಗಳು ಹಳೆಯ ಬೈಕ್‌ಗಳಂತೆ ಸಂಪೂರ್ಣವಾಗಿ ಇಲ್ಲದೇ ಇದ್ದರೂ ಹಳೆಯ ಬೈಕ್‌ಗಳ ವಿನ್ಯಾಸದ ರೇಖೆಗಳಂತೂ ಖಂಡಿತವಾಗಿಯೂ ಇರುತ್ತವೆ. ಜಾವಾ, ಯೆಜ್ಡಿ ಬೈಕ್‌ಗಳಿಗೆ ರಾಯಲ್ ಎನ್‌ಫೀಲ್ಡ್ ನಷ್ಟೇ ದೊಡ್ಡ ಸಂಖ್ಯೆಯ ಅಭಿಮಾನಿಗಳೂ ಇರುವ ಕಾರಣ, ಗುಣಮಟ್ಟದ, ಗಡುಸಾದ ಬೈಕ್‌ಗಳನ್ನು ಹೊರಬಿಟ್ಟಲ್ಲಿ ಯಶಸ್ಸು ಗಳಿಸುವುದು ಅಂತಹ ಸವಾಲಿನ ಕೆಲಸವೇನಲ್ಲ.